ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯವರಾದ ಮಲ್ಲಿಕಾರ್ಜುನ ಹುಲಗಬಾಳಿ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು. ಸರಳ ಶೈಲಿಯ ಹಾಸ್ಯ ಬರಹಗಳು, ಲಲಿತ ಪ್ರಬಂಧಗಳನ್ನು ಬರೆದಿರುವ ಅವರು ಕಥೆಗಳನ್ನೂ ಬರೆದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ, ಚೆನ್ನಮ್ಮ ವಿಶ್ವವಿದ್ಯಾಲಯ, ಮಹಾರಾಷ್ಟ್ರ ರಾಜ್ಯದ ಪಠ್ಯಪುಸ್ತಕಗಳಲ್ಲಿ ಮತ್ತು 'ಶತಮಾನದ ನೂರು ಪ್ರಬಂಧಗಳು' ಸಂಕಲನದಲ್ಲಿ ಅವರ ಪ್ರಬಂಧಗಳು ಸೇರಿವೆ.

ರಾಮನಟ್ಟಿಯ ಶ್ಯಾಮರಾವ ದೇಶಪಾಂಡೆಯವರದೂ ವಜನದಾರ ಮನೆತನವೆ ಸರಿ. ಸಣ್ಣ ಕೋಟೆಯಂತಿದ್ದ ಅವರ ವಾಡೆಯೊಳಗೆ ಹೊರಗಿನ ಗಾಳಿ ಬೀಸೋದು ಕಡಿಮೆ. ಆದ್ರೂ ದೇಶಪಾಂಡೆ ಮಾವನಿಗೆ ಹೊರಗಿನ ಚಟ. 'ಒಂದ್ ಕಲ್ಲಿಗೆ ಹತ್ತು ಹಣ್ಣು ಹೊಡೆಯೊ ಚಾಣಾಕ್ಷ. ಏನೇ ಮಾಡಿದ್ರೂ ಲಾಭದ ದೃಷ್ಟಿ ಇಟ್ಕೊಂಡೇ ಮಾಡಾಂವ' ಅಂತ ಅವನನ್ನು ಬಲ್ಲವರು ಹೇಳುತ್ತಿದ್ದದ್ದು ಕಿವಿಗೆ ಬೀಳುತ್ತಿತ್ತು. ಹಣ್ಮಂದೇವ್ರ ಗುಡಿಯಲ್ಲಿ ಕೃಷ್ಣಪಾರಿಜಾತದ ತಾಲೀಮು ಮಾಡಿಸುವ ಖುದಾಬಕ್ಷ ಮಾಸ್ತರಗೂ, ಮಾವನಿಗೂ ಸೋಳಾಣೆ ದೋಸ್ತಿ. ಸತ್ಯಭಾಮ ಪಾತ್ರದ ಚಂಪಾಬಾಯಿಯನ್ನು ಮಾವ ಇಟ್ಟುಕೊಂಡಿದ್ದನಂತೆ. ತನಗಾಗ ಒಂಬತ್ತೊ, ಹತ್ತೊ ಇದ್ದಿರಬಹುದು. ನಾಟಕದ ತಾಲೀಮ ನೋಡಲು ಮಾವನೊಂದಿಗೆ ಆಗಾಗ ಹೋಗುತ್ತಿದ್ದವನನ್ನು ಒಂದುದಿನ, ದಿಟ್ಟಿಸಿ ನೋಡುತ್ತ ಚಂಪಾಬಾಯಿ, 'ಪಾರ ನೋಡಾಕ ಮಾಟ ಅದಾನ... ಇವಂಗ್ ಬಾಲಗೋಪಾಲನ ಪಾತ್ರಾ ಹಾಕ್ಸಿದ್ರ ಹ್ಯಾಂಗ್ರೀ ಮಾಸ್ತರ್...?' ಕೇಳಿದ್ದಳು.

'ಬಹೂತ್ ಖೂಬ್, ಬಹೂತ ಖೂಬ್! ಮಸ್ತ್ ಆಗ್ತದ್ ಚಂಪಾಬೆನ್' ಖುದಾಬಕ್ಷ ಮಾಸ್ತರ ಕಣ್ಣರಳಿಸಿ ತನ್ನತ್ತ ನೋಡಿದ್ದರು.

'ನಂ ಚಂಪಾ ಹೇಳ್ತಾಂದಮ್ಯಾಲ್ ಮುಗೀತು... ಹ್ಹಿಹ್ಹಿ ಹ್ಹೀ...' ಮಾವ ಮೀಸೆಯೊಳಗೆ ನಕ್ಕ. ತನಗೂ ಒಂಥರಾ ಹುರುಪು. ಆ ದಿನ ಕಾರಹುಣ್ಣಿಮೆ. ಬೆಳದಿಂಗಳು. ಬಣ್ಣ ಹಚ್ಚಿಕೊಂಡು, ನಾಟಕದ ಅಡ್ಡೆ ಏರಿದ್ದೆ. ನನ್ನ ನಟನೆ ಕಂಡು, 'ವಾರೇವ್ಹಾ..!' ಹುರಿದುಂಬಿಸಿತ್ತು ಪ್ರೇಕ್ಷಕಜನ. 'ಮತ್ ಇಂವಾ ಯಾರ ಮಗಾ ಅಂತೀರಿ! ಅಪ್ಪನ್ನ ಮೀರಿಸೋ ಮಗಾ'. ಬೆನ್ನು ತಟ್ಟಿ ಜನ ಆಹೇರಿ ಮಾಡಿದರು. ಬಣ್ಣದ ಹುಚ್ಚು ತನಗೆ ಸಣ್ಣಗೆ ಮೆತ್ತಿಕೊಂಡಿದ್ದು ಆವಾಗಿಂದಲೆ ಇದ್ದೀತು. ಆದರೆ, ಮರುದಿನ ಕೆಲಸದಾಳುಗಳಿಂದ ಮಗನ ರಂಗಸಾಹಸ ಗೊತ್ತಾಗಿ, ಅವ್ವ ಕನಲಿ ಕೆಂಡವಾಗಿದ್ದಳು. 'ಹುಡ್ಗಾ ಒಂದ್ ಅಂಜಿಕಿಯೊಳಗ ಇರ್ತಾನಂತ್ಹೇಳಿ ಇಲ್ಲಿಗಿ ಕರ್ಕೊಂಡು ಬಂದ್ರ, ನೀನೇ ಹಿಂಗ್ ಮಾಡೂದೇನು ಅಣಾ?' ಮಾವನನ್ನು ಕೆಂಗಣ್ಣಿನಿಂದ ನೋಡಿದ್ದಳು .

'ಹೂಂ... ಅಪ್ಪನ ಮನೀಹಾಳ ಬುದ್ಧಿ ಎಲ್ಲಿ ಹೋಗ್ತದ ಮುಂಡೇಗಂಡಂದು...' ಎನ್ನುತ್ತ ಹಿಡಿದೆಳೆದು, ದನಕ್ಕೆ ಬಡಿದಂತೆ ನನಗೆ ಹೊಡೆದಿದ್ದಳು. ಇನ್ನೆಂದೂ ನಾಟಕದಾಗ ಪಾರ್ಟ ಮಾಡಾಂಗಿಲ್ಲಂತ ಪ್ರಾಣದೇವರ ಪಟದ ಮುಂದೆ ನಿಲ್ಲಿಸಿ ಆಣೆ ಮಾಡಿಸಿದಳು. ರಾಮನಟ್ಟಿಯಲ್ಲಿ ಇರುವತನಕ ಮೆತ್ತಗೆ ಇದ್ದ, ತನ್ನೊಳಗಿನ ಬಣ್ಣದ ಹುಚ್ಚು ಬಲಿತುಕೊಂಡಿದ್ದು ಧಾರವಾಡಕ್ಕೆ ಬಂದ ಮೇಲೆಯೆ. ಕಾಲೇಜ್ ಓದಿನೊಂದಿಗೆ ಹವ್ಯಾಸಿ ರಂಗತಂಡಗಳ ಒಡನಾಟವೂ ಸಾಥ್ ನೀಡಿತು. ತನ್ನ ಬದುಕಿನಲ್ಲಿ ಪದ್ಮಳ ಪ್ರವೇಶಕ್ಕೆ ಅದು ಕಾರಣವೂ ಆಯಿತು.

* * *

'ನನ್ನ ತಂಗಿಗೊಂದು ಗಂಡು ಕೊಡಿ' ಲಂಕೇಶರ ನಾಟಕದಲ್ಲಿ ತಾನು ರಾಮಣ್ಣ, ಪದ್ಮಳಿಗೆ ತಂಗಿ ಕಮಲಳ ಪಾತ್ರ. ತನ್ನಣ್ಣ ರಾಮಣ್ಣನ ಬಂಡಾಯದ ಬುರುಡೆಯನ್ನು ಹಿಗ್ಗಾಮುಗ್ಗಾ ಝಾಡಿಸುವ ಆಕೆ, 'ಸತ್ಯ, ಸತ್ಯ, ಸತ್ಯ. ಜಗತ್ತಿನ ಕೋಟಿ ಕೋಟಿ ತತ್ವಜ್ಞಾನಿಗಳು ಹುಡುಕಿ ಹುಡುಕಿ ಸಿಕ್ಕದೆ, ಮಣ್ಣಲ್ಲಿ ಮಣ್ಣಾಗಿ ಹೋದಮೇಲೆ ನೀನು ಹೊಸದಾಗಿ ಹುಡುಕುತ್ತಿದ್ದೀಯ ಸತ್ಯಾನ? ನಿನ್ನ ಮಾತು ನಂಬೋಕೆ ನಾನೇನು ಚಿಕ್ಕಪಿಳ್ಳೆ ಅಲ್ಲ...' ಎಂದು ಗುಟುರು ಹಾಕುವ, ಕೊನೇಲಿ, 'ಬದುಕಿನ ಕೊಳೆಯನ್ನೆಲ್ಲ ನನ್ನೆದೇಲಿ ಹಾಕಿ, ಅಪ್ಪನ ಠಕ್ಕನ್ನೆಲ್ಲ ನನಗೆ ಇಕ್ಕಿ, ನನ್ನ ಸುತ್ತ ಸಂಶಯದ ಚಕ್ರವ್ಯೂಹ ಕಟ್ಟಿ, ನನ್ನ ನಿರುಪಯುಕ್ತ ಕ್ರಿಮಿ ಮಾಡಿದೆ, ಅಣ್ಣಾ' ಎಂದು ಗರ್ಜಿಸುವ ಕಮಲ. ನಾಟಕದ ಕಮಲ,